**ಓ.ಎಸ್. ನಂಃ 184/2020**

**ಡಿ.ಡಬ್ಲ್ಯೂಃ 1**

**ದಿನಾಂಕ 13.08.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರಃ ಶ್ರೀ ಎಲ್.ವಿ.ಆರ್ ವಕೀಲರಿಂದಃ**

6. ನಿಡಿ.3 ರಡಿಯಲ್ಲಿ ನಾನು ಖರೀದಿ ಮಾಡಿದ ಆಸ್ತಿಯು ಕೃಷಿ ಜಮೀನಾಗಿದ್ದು, ಅದು ಗ್ರಾಮ ಠಾಣಾ ಆಸ್ತಿಯಾಗಿರುವುದಿಲ್ಲ. ಸದರಿ ಜಮೀ ನನ್ನು ಮೂಲ ಮಾಲೀಕರಾದ ಕಮಲಮ್ಮನವರು ಕೃಷಿಯೇತರ ಜಮೀನಾಗಿ ಪರಿವರ್ತನೆ ಮಾಡಿಸಿರಬಹುದು. ಸದರಿ ಜಮೀನನ್ನು ಕಮಲಮ್ಮ ರವರು ಗುಂಟೆ ಲೆಕ್ಕದಲ್ಲಿ ಖರೀದಿ ಮಾಡಿರುತ್ತಾರೆ. ಕಮಲಮ್ಮರವರು ನಿಡಿ.1 ರಡಿಯಲ್ಲಿ ಸರ್ವೆ ನಂಬರ್ 194/1-A/1 ರ ಜಮೀನನ್ನು ಖರೀದಿ ಮಾಡಿರುತ್ತಾರೆ. ನಿಡಿ.1 ರ ಆಸ್ತಿಯನ್ನು ಕಮಲಮ್ಮರವರು ತಮ್ಮೇಗೌಡರಿಂದ ಖರೀದಿ ಮಾಡಿರುತ್ತಾರೆ. ನಿಡಿ.1 ರಡಿಯಲ್ಲಿ ಕಮಲಮ್ಮರವರು 4 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಹಾಗೂ ಸದರಿ 4 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಕಂಜರವೆನ್ಸಿ ಗಲ್ಲಿ, ಪಶ್ಚಿಮಕ್ಕೆ ರತ್ನಮ್ಮರವರ ಜಮೀನು, ಉತ್ತರಕ್ಕೆ ಬಲರಾಮೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ.

7. ನಿಡಿ.3 ರಡಿಯಲ್ಲಿ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನಾನು ಸದರಿ ಜಮೀನನ್ನು ಅಳತೆ ಮಾಡಿದ ನಂತರ ಖರೀದಿ ಮಾಡಿರುತ್ತೇನೆ. ನಿಡಿ.2 ರಡಿಯಲ್ಲಿ ಖರೀದಿ ಮಾಡಿದ ಆಸ್ತಿಯನ್ನು ಮಾರಾಟಗಾರರಾದ ರಾಜಮ್ಮ ಕೋಂ ಮೂಡಲಗಿರಿಗೌಡರವರು ಸರ್ವೆ ಮಾಡಿಸಿದ ನಂತರ ಖರೀದಿ ಮಾಡಿದ್ದು, ಸದರಿ ಸರ್ವೆ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕಮಲಮ್ಮ ರವರು ಮಾಡಿಸಿದ ಸರ್ವೆ ನಕಾಶೆಯನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ರಾಜಮ್ಮ ರವರು ನಿಡಿ.2 ರಡಿಯಲ್ಲಿ ಗುಂಟೆ ಲೆಕ್ಕದಲ್ಲಿ ಜಮೀನನ್ನು ಖರೀದಿ ಮಾಡಿರುತ್ತಾರೆ. ನಿಡಿ.2 ರಡಿಯಲ್ಲಿ ರಾಜಮ್ಮ ರವರು 4 ಗುಂಟೆ ಜಮೀನನ್ನು ಖರೀದಿ ಮಾಡಿದ್ದು, ಅದರ ಚೆಕ್ಕುಬಂದಿ ಪೂರ್ವಕ್ಕೆ ಕಂಜರವೆನ್ಸಿ ಗಲ್ಲಿ,

ಪಶ್ಚಿಮಕ್ಕೆ ರತ್ನಮ್ಮರವರ ಜಮೀನು, ಉತ್ತರಕ್ಕೆ ಬಲರಾಮೇಗೌಡರ ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ.

8. ನಿಡಿ.3 ರಡಿಯಲ್ಲಿ 4 ಗುಂಟೆ ಜಮೀನನ್ನು ನಾನು ಖರೀದಿ ಮಾಡುವ ಪೂರ್ವದಲ್ಲಿ ಅದಕ್ಕೆ ಸಂಬಂಧಿಸಿದ 11–E ನಕಾಶೆಯನ್ನು ರಾಜಮ್ಮರವರು ಮಾಡಿಸಿರುತ್ತಾರೆ. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಿಡಿ.3 ರ ಷೆಡ್ಯೂಲ್ ನಲ್ಲಿ ನಮೂದಿಸಿರುವಂತಹ ಸರ್ವೆ ನಕಾಶೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ.1 ಮತ್ತು 2 ರ ಖರೀದಿ ಪತ್ರದ ಷೆಡ್ಯೂಲ್ ನಲ್ಲಿ ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣ 4 ಗುಂಟೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.1 ಮತ್ತು 2 ರಲ್ಲಿ ಇರುವ ಆಸ್ತಿಯನ್ನು ನಾನು ನಿಡಿ.3 ರಡಿಯಲ್ಲಿ ನಾನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೂಲ ದಾಖಲೆಗಳಾದ ನಿಡಿ.1 ಮತ್ತು 2 ರಡಿಯಲ್ಲಿ ಮೂಲ ಮಾಲೀಕರಾದ ಕಮಲಮ್ಮ ಮತ್ತು ರಾಜಮ್ಮರವರು ಕೇವಲ ಅಡಿ ಲೆಕ್ಕದಲ್ಲಿ ಜಮೀನನ್ನು ಖರೀದಿ ಮಾಡಿದ್ದು, ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು ಗುಂಟೆ ಲೆಕ್ಕದಲ್ಲಿ ಜಮೀನನ್ನು ತಪ್ಪಾಗಿ ನಿಡಿ 3 ರಲ್ಲಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

9. ನಿಪಿ.2 ರ ದಾಖಲೆಯ ಮೂಲಕ ವಾದಿಗೆ ದಾವಾ ಆಸ್ತಿಯು ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಚನ್ನೇಗೌಡರ ಜಮೀನು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿರುವ ಸದರಿ ಜಮೀನನ್ನೇ ನಾನು ಚನ್ನೇಗೌಡರ ಹೆಂಡತಿಯಾದ ಕಮಲಮ್ಮರವರಿಂದ ಖರೀದಿ ಮಾಡಿರುತ್ತೇನೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಲಲಿತಮ್ಮ ರವರ ಜಮೀನು, ಉತ್ತರಕ್ಕೆ ಮೊಗಣ್ಣನ ಬಸವೇಗೌಡರ ಜಮೀನು ಹಾಗೂ ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ.

10. ದಾವಾ ಆಸ್ತಿಯ ಪೈಕಿ ಪೂರ್ವ ದಿಕ್ಕಿನಲ್ಲಿ 30x30 ಅಡಿ ಜಮೀನನ್ನು ನಾನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ಒತ್ತುವರಿ ಮಾಡಿರುತ್ತೇನೋ ಇಲ್ಲವೋ ಎಂದು ನೋಡಲು ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಲು ನನಗೆ ಯಾವುದೇ ಅಭ್ಯಂತರವಿಲ್ಲ. ವಾದಿಯ ಅನುಪಸ್ಥಿತಿಯ ದುರ್ಲಾಭವನ್ನು ಪಡೆದು 2019 ರಲ್ಲಿ ದಾವಾ ಆಸ್ತಿಯ ಪೈಕಿ 30x30

ಅಡಿ ಜಮೀನನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮೂಲ ಮಾಲೀಕರೊಂದಿಗೆ ಶಾಮೀಲಾಗಿ ನಿಡಿ.1 ರಿಂದ 3 ರ ದಾಖಲೆಗಳನ್ನು ಸುಳ್ಳಾಗಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುತ್ತೇನೆ ಎಂದು ಒಪ್ಪಿಕೊಂಡರೇ ದಾವಾ ಆಸ್ತಿಯನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ನಾನು ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**